ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/83/ಇಎಸ್‌ಟಿ 4 (ಬಿ) 2012-13 ಭಾಗ-2/1692

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ಬೆಂಗಳೂರು-560001
ದಿನಾಂಕ: 13.09.2017

ಸುತ್ತೋಲೆ

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಅನುದಾನಿತ ಸಿಬ್ಬಂದಿಗಳ ಅನುದಾನಪೂರ್ವದ ಸೇವೆಯನ್ನು ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳಿಗೆ ಪರಿಗಣಿಸಲು ಕೋರಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 103 ಟಿಪಿಇ 2017 ದಿನಾಂಕ: 01.09.2017

*-*-*-*-*

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದ ಸರ್ಕಾರದ ಪತ್ರದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳ ಅನುದಾನಿತ/ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳಿಗೆ ಹೊಸ ನಿಯಮಾವಳಿಗಳ ಪ್ರಕಾರ ನಿವೃತ್ತಿ ವೇತನ ನಿಗದಿ ಮಾಡಿದರೆ ತಗುಲಬಹುದಾದ ಅಂದಾಜು ಆರ್ಥಿಕ ವೆಚ್ಚದ ಮಾಹಿತಿ, ವರ್ಷವಾರು ನಿವೃತ್ತಿಯಾಗುವ ಶಿಕ್ಷಕರುಗಳ ಸಂಖ್ಯೆ ಆಧಾರದ ಮೇಲೆ ನಿವೃತ್ತಿ ವೇತನವನ್ನು ನಿಗದಿಗೊಳಿಸಿದರೆ ಅವರುಗಳಿಗೆ ನೀಡಬೇಕಾಗುವ ನಿವೃತ್ತಿ ವೇತನದ ಅಂಕಿ ಅಂಶಗಳ ಮಾಹಿತಿಯನ್ನು ಕೂಡಲೇ ಒದಗಿಸಲು ತಿಳಿಸಲಾಗಿದೆ.

ಆದುದರಿಂದ ಸರ್ಕಾರದ ಪತ್ರದಲ್ಲಿ ಕೇಳಲಾಗಿರುವ ಮೇಲ್ಕಂಡ ಮಾಹಿತಿಯನ್ನು ದಿನಾಂಕ: 18.09.2017 ರೊಳಗಾಗಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯಕ್ಕೆ ವಿದ್ಯುನ್ಮಾನ (bngdte@gmail.com) ಮತ್ತು ಮುದ್ರಿತ ಪ್ರತಿಗಳ ರೂಪದಲ್ಲಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

16/9

ಜಂಟಿ ನಿರ್ದೇಶಕರು (ಆ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

ಎಲ್ಲಾ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಮತ್ತು
ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ

ಪ್ರತಿ:

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ (ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು)